OS No.67/2020
PW-2

(ದಿನಾಂಕ 10-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಬಿ ಎಂ ಎ ವಕೀಲರಿಂದಃ-**

1. ನಾನು ಉಪನಾಯಕನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ಬಸವರಾಜ ಇವರು ಉಪನಾಯಕನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಪ್ರತಿವಾದಿ ನಂ 1 ರಿಂದ 3 ರವರು ಕೇಶವರಾಯನಬಂಡಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಈ ದಾವೆಯನ್ನು ಹನುಮವ್ವ ಇವರು ಅವರ ಅಣ್ಣರ ಮೇಲೆ ಪಾಲು ವಿಭಾಗಕ್ಕಾಗಿ ದಾಖಲಿಸಿದ್ದಾರೆ. ದಾವಾ ಅಸ್ತಿಗಳ ಸರ್ವೆ ನಂಬರು, ವಿಸ್ತೀರ್ಣ ಚೆಕ್ಕು ಬಂದಿ ನನಗೆ ಗೊತ್ತಿಲ್ಲ ಆದರೆ 5 ಜಮೀನುಗಳು ಇವೆ. ಸದರಿ 5 ಜಮೀನುಗಳ ದಾಖಲಾತಿಗಳನ್ನು ನಾನು ನೋಡಿದ್ದೇನೆ. ಯಾರ ಯಾರ ಹೆಸರಿನಲ್ಲಿ ಯಾವ ಯಾವ ಜಮೀನುಗಳು ದಾಖಲು ಇದೆ ಎಂದದು ನನಗೆ ಗೊತ್ತಿಲ್ಲ. 2009-10 ರಲ್ಲಿ ಪ್ರತಿವಾದಿ ನಂ 1, 3 ಮತ್ತು ತಿಂದಪ್ಪ ಇವರು ವಿಭಾಗ ಮಾಡಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಪ್ರತಿವಾದಿ ನಂ 1 ರಿಂದ 3 ರವರು ದಾವಾ ಅಸ್ತಿಗಳ ಸ್ವಾಧೀನದಲ್ಲಿ ಇರುತ್ತಾರೆ ಅಂದರೆ ಸಾಕ್ಷಿಯು ಸ್ವಾಧೀನದಲ್ಲಿ ಇರುತ್ತಾರೆ ಆದರೆ ಭಾಗ ಮಾಡಿಕೊಂಡಿರುವುದಿಲ್ಲ ಎನ್ನುತ್ತಾರೆ.

2. 27 ಸೆನ್ಸ ಜಮೀನು ಮಾತ್ರ ವಾದಿ ಹನುಮವ್ವ ಇವರ ಹೆಸರಿನಲ್ಲಿ ನಮೂದು ಇದೆ ಅಂದರೆ ಸರಿ. ಸದರಿ 27 ಸೆನ್ಸ ಜಮೀನನ್ನು ವಾದಿ ಹನುಮವ್ವ ಇವರಿಗೆ ಉಳುಮೆ ಮಾಡಲು ಕೊಟ್ಟಿದ್ದರು ಅಂದರೆ ಸುಳ್ಳು. ಆ ವಿಚಾರ ನನಗೆ ಎಲ್ಲಾ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಮತ್ತು ವಾದಿ ನಂ 1(ಎ) ಒಂದೇ ಊರಿನವರು ಮತ್ತು ಕುಲಸ್ಥರು. ನನ್ನ ಮತ್ತು ವಾದಿ ನಂ 1(ಎ) ನಡುವೆ ಒಳ್ಳೆಯ ವಿಶ್ವಾಸ ಇದೆ ಅಂದರೆ ಸರಿ. ಈ ದಾವೆಯಲ್ಲಿ ವಾದಿಯು ಏನು ದಾಖಲೆಗಳನ್ನು ಹಾಕಿರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. 3 ನೇ ಪ್ರತಿವಾದಿಯು ತನ್ನ ಸ್ವಂತ ದುಡುಮೆಯಿಂದ ದಾವಾ

1 ನೇ ಅಸ್ತಿಯನ್ನು ಗಣೇಶ ಇವರಿಂದ ಖರೀದಿ ಮಾಡಿರುತ್ತಾರೆ ಅಂದರೆ ಸಾಕ್ಷಿಯು ಖರೀದಿ ಮಾಡಿರುತ್ತಾರೆ ಅದರೆ 3 ನೇ ಪ್ರತಿವಾದಿಯ ತಂದೆ 3 ನೇ ಪ್ರತಿವಾದಿಯ ಹೆಸರಿನಲ್ಲಿ ಮಾಡಿಸಿರುತ್ತಾರೆ.

3. 1 ನೇ ಪ್ರತಿವಾದಿ ಕಲ್ಲಬಾಳಪ್ಪ ಇವರೂ ಸಹ ಒಂದು ಜಮೀನನ್ನು ಖರೀದಿ ಮಾಡಿರುತ್ತಾರೆ ಅಂದರೆ ಸರಿ. ಕಲ್ಲಬಾಳಪ್ಪ ಇವರ ಹೆಸರಿನಲ್ಲಿ ಇರುವಂತಹ ಜಮೀನು ಮತ್ತು ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ 1 ನೆ ಅಸ್ತಿಯನ್ನು ತನ್ನ ಸ್ವಂತ ದುಡುಮೆಯಿಂದ ಖರೀದಿ ಮಾಡಿರುತ್ತಾನೆ ಈ ವಿಚಾರ ನನಗೆ ಗೊತಿತದ್ದರೂ ಸಹ ವಾದಿಯರಿಗೆ ಅನುಕೂಲ ಮಾಡಲು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿ ನಂ 1 ರಿಂದ 3 ರವರು ಬೇರೆ ಬೇರೆ ಆಗಿ ಬೇರೆ ಬೇರೆ ಮನೆಗಳಲ್ಲಿ ವಾಸವಾಗಿರುತ್ತಾರೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ನಡುವೆ ವಿಭಾಗ ಆಗಿಲ್ಲ ಅನ್ನುತ್ತಾರೆ. 1 ರಿಂದ 3 ನೇ ಪ್ರತಿವಾದಿಯರು ವಾಸವಾಗಿರುವ ಮನೆಗಳ ನಂಬರುಗಳನ್ನು ನನಗೆ ಹೇಳಲು ಬರುವುದಿಲ್ಲ. ಈ ದಾವೆಯ ಅಸ್ತಿಯಲ್ಲಿ ಪ್ರತಿವಾದಿಯರ ನಡುವೆ ಪಾಲು ವಿಭಾಗ ಆಗಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

4. ಗುಂಡೂರು ನಿಂಗಪ್ಪ ಇವರಿಗೆ 4 ಜನ ಮಕ್ಕಳು. ಅವರಲ್ಲಿ ತಿಂದಪ್ಪ ಮತ್ತು ಹನುಮವ್ವ ಇವರು ಮೃತ ಪಟ್ಟಿದ್ದಾರೆ. ತಿಂದಪ್ಪನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ಪ್ರತಿವಾದಿಯರ ನಡುವೆ ಈಗಾಗಲೇ ಪಾಲು ವಿಭಾಗವಾಗಿದ್ದು 27 ಸೆಸ್ಸ ಜಮೀನನ್ನು ವಾದಿಗೆ ಉಳುಮೆ ಮಾಡಲು ನೀಡಿದ್ದು ಆದರೆ ವಾದಿ ಈಗ ಒಂದು ಸುಳ್ಳು ದಾವೆಯನ್ನು ದಾಖಲಿಸಿದ್ದು ಅದಕ್ಕೆ ಅನುಕೂಲ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

5. ನಾನು ಊರಿನಲ್ಲಿ ಮುಖಂಡನಾಗಿರುತ್ತೇನೆ, ಸಾಕಷ್ಟು ಪಂಚಾಯತಿಗಳನ್ನು ಮಾಡಿರುತ್ತೇನೆ ಅಂದರೆ ಸರಿ. ಈ ದಾವೆ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ವಾದಿಯರು ನನಗೆ ಅತ್ಮಿಯವಾಗಿರುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗುಂಡೂರು ನಿಂಗಪ್ಪ ಇವರಿಗೆ ದಾವಾ ಅಸ್ತಿಗಳು ಯಾವ ರೀತಿ ಬಂದವು ಅನ್ನುವುದರ ಬಗ್ಗೆ ನನಗೆ ಮಾಹಿತಿ ಇಲ್ಲ, ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ